


# ಸೇವೆಯ ತೋಟದಲ್ಲಿ ಕನಸಿನ ಕೊಯ್ಲು!

‘ಭಾರತೀಯ ನಾಗರಿಕ ಸೇವೆ’ ಎನ್ನುವುದು ಬಹುತೇಕ ವಿದ್ಯಾರ್ಥಿಗಳ ಕಣ್ಣಂಚಿನಲ್ಲಿ ಹೊಳೆಯುವ ಕನಸು. ಆದರೆ ಈ ಕನಸನ್ನು ನೇವರಿಸಲು ಸಾಧ್ಯವಾಗುವುದು ಕೆಲವೇ ಕೆಲವರಿಗೆ ಮಾತ್ರ. ಆದರೆ ‘ಇದು ನಮಗೆ ಕೈಗೆಟುಕುವುದಿಲ್ಲ ಬಿಡು’ ಎನ್ನುವವರೂ ‘ಒಮ್ಮೆ ಪರೀಕ್ಷೆ ಬರೆದು ನೋಡೋಣ’ ಎನ್ನುವಷ್ಟು ಆಕರ್ಷಣೆ ಭಾರತೀಯ ನಾಗರಿಕ ಸೇವೆಗೆ ಇದೆ. ಕೆಲವು ವಾರಗಳ ಹಿಂದೆ ಹೊರಬಿದ್ದಿರುವ ಈ ವರ್ಷದ ಯುಪಿಎಸ್‌ಸಿ ಪರೀಕ್ಷಾ ಫಲಿತಾಂಶ ಹೊಸ ದಿಕ್ಸೂಚಿಯೊಂದನ್ನು ತೆರೆದಿಟ್ಟಿದೆ. ಆ ದಿಕ್ಸೂಚಿಯ ಹೊಳೆವ ಮುಳ್ಳಿನ ಯಶಸ್ಸಿನ ದಿಕ್ಕು ಗ್ರಾಮೀಣ ಭಾರತದತ್ತ ಮಾಡಿದೆ. ಹಳ್ಳಿಗಳು ಭಾರತದ ಬೆನ್ನೆಲುಬು ಎನ್ನುವ ಮಾತಿಗೂ ಈ ಫಲಿತಾಂಶಕ್ಕೂ ಒಳಸಂಬಂಧವೊಂದು ಇದ್ದಂತಿದೆಯಲ್ಲವೇ? ಗ್ರಾಮಭಾರತ ಬೆಳಗಲು ಅಲ್ಲಿನ ಮಣ್ಣಿನ ಮಕ್ಕಳು ಕಾರ್ಯಾಂಗದ ಭಾಗವಾಗುವುದು ಅಗತ್ಯವಷ್ಟೇ ಅಲ್ಲ, ಅನಿವಾರ್ಯ ಕೂಡ. ಹಾಗಾಗಿಯೇ ಗ್ರಾಮೀಣ ಭಾಗದ ಪ್ರತಿಭಾವಂತರ ಹೆಸರುಗಳೇ ಹೆಚ್ಚಾಗಿ ಪ್ರಜ್ವಲಿಸಿರುವ ಈ ಸಲದ ಯುಪಿಎಸ್‌ಸಿ ಪರೀಕ್ಷೆ, ಭವಿಷ್ಯದ ಹೊಸ ಬೆಳಕನ್ನೂ ಸೂಚಿಸುತ್ತಿರುವಂತಿದೆ. ಕಷ್ಟದ ಬದುಕಿನ ನೊಗ ಹೊರುತ್ತಲೇ ಕನಸಿನ ಕುಲಾವಿಯನ್ನು ನೇಯ್ದಿರುವ ಹಲವು ಸ್ಫೂರ್ತಿದಾಯಕ ಮಾದರಿಗಳನ್ನು ನಮ್ಮ ಮುಂದಿಡುವ ಈ ಲೇಖನ, ಯುಪಿಎಸ್‌ಸಿ ಪರೀಕ್ಷೆಯಲ್ಲಿ ಯಶಸ್ಸು ಗಳಿಸುವ ಕೆಲವು ಸರಳ ಸೂತ್ರಗಳನ್ನೂ ನೀಡುತ್ತದೆ.

■ ಪ್ರವೀಣ ಕುಲಕರ್ಣಿ

